

## ಬಕುಲದ ಹೂವಿನ ಬೀಡು, ಮಲೆನಾಡು

ಹಸುರು ಹೊದ್ದ ನಿತ್ಯ ಹರಿದ್ವರ್ಣದ ಮಲೆನಾಡಿನ ಅರಣ್ಯದ ಒಳ ಹೊಕ್ಕರೆ ನಮ್ಮ ಮೂಗು ಬಕುಲದ ಹೂವಿನ ಕಂಪನ್ನು ಆಘ್ರಾಣಿಸದೆ ಬಿಡದು. ಬಕುಲದ ಮರದಡಿಯಲ್ಲಿ ಹಾಸಿದ ತರಗೆಲೆಗಳ ನಡುವೆ ನಕ್ಷತ್ರಾಕಾರದ ಬಿಳಿಯ ಹೂಗಳು ರಂಗೋಲಿ ಇಟ್ಟ ಹಾಗೆ ಚೆಲ್ಲಿಕೊಂಡಿರುವುದನ್ನು ನೋಡುವುದೇ ಸೋಜಿಗ. ಈ ಹೂಗಳನ್ನು ಆಯ್ದು, ಪೋಣಿಸಿ ಮಾಲೆ ಮಾಡಿ ತಲೆಗೆ ಮುಡಿದುಕೊಳ್ಳುತ್ತಾರೆ. ಬೇಸಿಗೆಯಲ್ಲೇ ಹೆಚ್ಚಾಗಿ ಸಿಗುವ ಈ ಹೂಗಳು ತಿಂಗಳುಗಟ್ಟಲೆ ಬಾಡದೇ ಹೂವಿನ ಕಂಪು ಹಾಗೇ ಇರಬಲ್ಲದು. ನಂತರ ಕಾಯಿ ಬಿಟ್ಟು ಹಣ್ಣಾಗುತ್ತದೆ. ಹಣ್ಣನ್ನು ತಿಂದ ನಂತರ ನಾಲಿಗೆ ಮೇಲೆ ಉಳಿಯುವ ರವೆ ರವೆಯಾದ ರಸದ ರುಚಿಯು ಆಹಾ ಎನಿಸುತ್ತದೆ. ವಧು ವರರಿಗೆ ಈ ಮಾಲೆ ಹಾಕಿಕೊಳ್ಳುವುದು ಕಡ್ಡಾಯ. ಮನೆಯಂಚಿನ ಬೆಟ್ಟಕ್ಕೆ ಹೋಗಿ ಬಂದ ನಮ್ಮ ಮಗಳು ಬಕುಲದ ಹೂವಿನಲ್ಲಿಯೇ 'ಸುಧಾ' ಎನ್ನುವ ಅಕ್ಷರ ಮೂಡಿಸಿದ್ದು ಹೀಗೆ.

–ದತ್ತಾತ್ರೇಯ ಭಟ್ಟ, ಕಣ್ಣಿಪಾಲ

## ನಿಡಸೋಸಿ ಒಡಲ ದೊಡ್ಡಹುಣಸೆ

ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲ್ಲೂಕಿನ ನಿಡಸೋಸಿ ಗ್ರಾಮದಲ್ಲಿ 4–5 ಶತಮಾನ ಕಂಡ ದೊಡ್ಡಹುಣಸೆ ಮರಗಳು ಪ್ರವಾಸಿಗರ ಆಕರ್ಷಣೆಯ ಕೇಂದ್ರವಾಗಿವೆ. ಗ್ರಾಮದ ಹೊರವಲಯದಲ್ಲಿರುವ ದುರದುಂಡೀಶ್ವರ ಸಿದ್ಧಸಂಸ್ಥಾನ ಮಠಕ್ಕೆ ಸೇರಿದ ಬಿಲ್ವವನದ ಆವರಣದಲ್ಲಿರುವ ಎರಡು ಬೃಹತ್ ಮರಗಳು ಪ್ರಕೃತಿಯ ವೈಭವಕ್ಕೆ ಸಾಕ್ಷಿಯಾಗಿ ನಿಂತಿವೆ. 15 ಮೀಟರಿಗೂ ಹೆಚ್ಚು ಎತ್ತರವಿರುವ ಒಂದೊಂದು ವೃಕ್ಷದ ಸುತ್ತಳತೆ 7–8 ಮೀಟರಿಗೂ ಹೆಚ್ಚಿದೆ. ಎರಡೂ ಮರಗಳು ಒಂದಕ್ಕೊಂದು ಹೊಂದಿಕೊಂಡಿದ್ದು, ನೋಡಲು ಸೊಗಸಾಗಿ ಕಾಣುತ್ತವೆ.

ಈ ಅಪರೂಪದ ವೃಕ್ಷದ ವೈಜ್ಞಾನಿಕ ಹೆಸರು 'ಅಡೆನ್ಸೋನಿಯಾ ಡಿಜಿಟಾಟಾ'. ಜಗತ್ತಿನ ಅತ್ಯಂತ ಪ್ರಾಚೀನ ವೃಕ್ಷದ ಸಾಲಿಗೆ ಸೇರಿರುವ ದೊಡ್ಡಹುಣಸೇಮರ 6 ಸಾವಿರ ವರ್ಷಗಳವರೆಗೆ ಬದುಕಬಲ್ಲವು ಎಂದು ಹೇಳಲಾಗುತ್ತದೆ. ಕಾಯಿಯು ಸ್ವಲ್ಪ ಹುಳಿ, ಸ್ವಲ್ಪ ಸಿಹಿ ಹೊಂದಿದ್ದು, ರುಚಿಯಾಗಿರುತ್ತದೆ. ಗಾತ್ರದಲ್ಲಿ ದೊಡ್ಡದಾಗಿದ್ದರಿಂದ ಈ ವೃಕ್ಷಗಳಿಗೆ 'ದೊಡ್ಡಹುಣಸೆಮರ' ಎಂದು ಕರೆಯಲಾಗುತ್ತದೆ. ಕರ್ನಾಟಕ, ಮಹಾರಾಷ್ಟ್ರ, ಗೋವಾ ಮುಂತಾದೆಡೆಯಿಂದ ಇಲ್ಲಿಗೆ ಜನರು ಇವುಗಳನ್ನು ನೋಡಲು ಬರುತ್ತಾರೆ. ನಿಡಸೋಸಿ ಮಠದ ಪಂಚಮ ಶಿವಲಿಂಗೇಶ್ವರ ಸ್ವಾಮೀಜಿಯವರ ಪ್ರಯತ್ನದಿಂದ ದೊಡ್ಡಹುಣಸೆ ಮರಗಳನ್ನು ರಕ್ಷಣೆ ಮಾಡಲಾಗಿದ್ದು, ಬಿಲ್ವಾಶ್ರಮದ ಆವರಣದಲ್ಲಿ 250ಕ್ಕೂ ಹೆಚ್ಚು ಬಿಲ್ವ ಮರಗಳನ್ನು ನೆಡಲಾಗಿದೆ. ಭಗ್ನಗೊಂಡಿರುವ ಸಾವಿರಕ್ಕೂ ಹೆಚ್ಚು ಮೂರ್ತಿಗಳನ್ನು ಕೂಡ ಇಲ್ಲಿ ಸಂಗ್ರಹ ಮಾಡಲಾಗಿದೆ. ಹೀಗಾಗಿ ಬೇಸಿಗೆಕಾಲದಲ್ಲಿ ಇದೊಂದು ಪಿಕ್‌ನಿಕ್ ಸ್ಥಳವಾಗಿದೆ. ಶ್ರಾವಣ ಮಾಸ, ಶಿವರಾತ್ರಿ, ಯುಗಾದಿ ಮುಂತಾದ ಹಬ್ಬಹರಿದಿನಗಳಲ್ಲಿ ಇಲ್ಲಿಗೆ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುತ್ತಾರೆ.

–ಚಂದ್ರಶೇಖರ ಎಸ್. ಚಿನಕೇಕರ, ಚಿಕ್ಕೋಡಿ







## ಬಂಗಾರದ ಕಳಸ

ಬಾಗಲಕೋಟೆ ಜಿಲ್ಲೆಯ ಹುನಗುಂದ ತಾಲ್ಲೂಕಿನ ಕೂಡಲ ಸಂಗಮದ ಸಂಗಮೇಶ್ವರ ಜಾತ್ರೆಯ ರಥೋತ್ಸವದ ವಿಶೇಷವೇ ಅಲ್ಲಿನ ಬಂಗಾರದ ಕಳಸ. ತೇರಿನ ಬಂಗಾರದ ಕಳಸವು ಐದು ಅಡಿ ಎತ್ತರ, ಐವತ್ತು ಕೆ.ಜಿ. ತೂಕವಿದೆ. ಸಾಮಾನ್ಯವಾಗಿ ಜಾತ್ರಾ ರಥೋತ್ಸವಗಳಿಗೆ ಕಳಸ ಅದೇ ಊರಿಂದ ಬರುವುದು ವಾಡಿಕೆ. ಆದರೆ, ಸಂಗಮೇಶ್ವರ ಮಹಾರಥೋತ್ಸವಕ್ಕೆ ಬೇರೊಂದು ಊರಿಂದ, ಅಂದರೆ ರಕ್ಕಸಗಿ ಅಮರಾವತಿ ದೇಸಾಯಿ ಮನೆಯಿಂದ ಪಾದಯಾತ್ರೆಯ ಮುಖಾಂತರ ಈ ಕಳಸವು ಸಂಗಮೇಶ್ವರನ ಸನ್ನಿಧಿಗೆ ಬರುತ್ತದೆ. ಕಳಸವನ್ನು ತಲೆಯ ಮೇಲೆ ಹೊತ್ತು ಬರಿಗಾಲಿನಿಂದ ಪಾದಯಾತ್ರೆ ಮಾಡುವುದು ಎಲ್ಲರ ಗಮನಸೆಳೆಯುತ್ತದೆ. ಮಾರ್ಗದುದ್ದಕ್ಕೂ ಭಕ್ತರ ಪೂಜೆ, ಕರಡಿ ಮಜಲಿನೊಂದಿಗೆ ರಾರಾಜಿಸುತ್ತಿ ರುತ್ತದೆ.

–ಮಹಾಂತೇಶ ಬಾಗೇವಾಡಿ, ಬಾದಾಮಿ